# ಹೊರಳು ದಾರಿಯಲ್ಲಿ ಆಯುರ್ವೇದ

– 25ನೇ ಪುಟದಿಂದ

ಕೊಡಿಸಿದರಂತೆ. ಅನಂತರ ಅವರು ಚಿಕಿತ್ಸೆಯಲ್ಲಿ ಹೊಸ ತಂತ್ರಗಳನ್ನು ಅಳವಡಿಸುತ್ತ ಸಾಗಿದರು. ಆದರೆ ಆ ವಿದ್ಯೆಯನ್ನು ಕಲಿತದ್ದು ಭಾರತೀಯರಿಂದಲೇ ಎಂಬುದು ಮಹತ್ವದ ಸಂಗತಿ.

## ಔಷಧಿ ಬಳಕೆಯ ಬಗ್ಗೆ

ಆಯುರ್ವೇದ ಔಷಧಿಗಳನ್ನು ತಯಾರಿಸುವವರು ಈ ಕೆಳಗಿನ ಅಂಶಗಳತ್ತ ಗಮನ ಹರಿಸಬೇಕು.

* ತಾಜಾ ಗಿಡಮೂಲಿಕೆಗಳನ್ನು ಅರೆದು ರಸವನ್ನು ಸೇವಿಸುವುದಾದಲ್ಲಿ ರಸ ತಯಾರಿಸಿದ 3 ಗಂಟೆಯೊಳಗೆ ಸೇವಿಸಬೇಕು. ರಸವನ್ನು ತಯಾರಿಸುವಾಗ ಸ್ವಚ್ಛತೆ ಬಹಳ ಮುಖ್ಯ. ಗಿಡಮೂಲಿಕೆಯನ್ನು ಸ್ವಚ್ಛಗೊಳಿಸಬೇಕು ಮತ್ತು ಬಟ್ಟಲು, ಪಾತ್ರೆ, ಚಮಚ, ಶೋಧಿಸುವ ವಸ್ತ್ರ ಎಲ್ಲವೂ ಸ್ವಚ್ಛವಾಗಿರಬೇಕು. ಯಾವುದೇ ಔಷಧಿ ಗಿಡಮೂಲಿಕೆಗಳ ಕಷಾಯ ತಯಾರಿಸಿದ 24 ಗಂಟೆಗಳಲ್ಲಿ ಉಪಯೋಗಿಸಬೇಕು.

* ಔಷಧೀಯ ಗಿಡಮೂಲಿಕೆಗಳ ಪುಡಿಯನ್ನು (ಚೂರ್ಣ) ಆರು ತಿಂಗಳಿಂದ ಮೂರು ವರ್ಷದವರೆಗೆ ಸಂಗ್ರಹಿಸಿಡಬಹುದು ಮತ್ತು ಬಳಸಬಹುದು.

* ಔಷಧೀಯ ಗಿಡಮೂಲಿಕೆಗಳಿಂದ ತಯಾರಿಸಿದ ಆಸವ, ಅರಿಷ್ಟಗಳು ಹಳೆಯದಾದಷ್ಟು ಒಳ್ಳೆಯದು. ತಯಾರಿಸಿ ಹತ್ತು ವರ್ಷಗಳಾಗಿದ್ದರೂ ಉಪಯೋಗಿಸಬಹುದು. ಯಾವುದೇ ಅಡ್ಡ ಪರಿಣಾಮ ಇರುವುದಿಲ್ಲ. ಉದಾಹರಣೆಗೆ: ಅಶ್ವಗಂಧಾರಿಷ್ಟ, ಪುನರ್ವಾಸವ ಇತ್ಯಾದಿ.

## ಜಾಗತೀಕರಣದ ಪ್ರಭಾವ

ಅಮೆರಿಕಾ, ಕೆನಡಾ, ಜಪಾನ್, ಜರ್ಮನಿ, ರಷ್ಯಾ ಮೊದಲಾದ ರಾಷ್ಟ್ರಗಳಲ್ಲಿ ಆಯುರ್ವೇದದ ಅಧ್ಯಯನ ಈಗ ಭರದಿಂದ ಸಾಗಿದೆ. ಆಯುರ್ವೇದವು ಜಗತ್ತಿನ ಎಲ್ಲ ವಿಧದ ಚಿಕಿತ್ಸಕರ ಗಮನವನ್ನೂ ಸೆಳೆಯುತ್ತಿದೆ. ಬಹುತೇಕ ತಜ್ಞ ವೈದ್ಯರು, ಹೆಚ್ಚು

## ಸಂಶೋಧನೆಯ ಮಹತ್ವ

ಆಯುರ್ವೇದದಲ್ಲಿ ಸಂಶೋಧನೆಯೂ ಮಹತ್ವದ ಪಾತ್ರ ವಹಿಸುತ್ತಿದೆ. ಆಯುರ್ವೇದವು ಪೀಳಿಗೆಯಿಂದ ಪೀಳಿಗೆಗೆ ಸಂರಕ್ಷಿಸಲ್ಪಟ್ಟಿರುವ ಅನುಭವಗ್ರಾಹಿ ವೈದ್ಯ ವಿಜ್ಞಾನವಾಗಿದೆ. ದೇಶದಲ್ಲಿ ಅನೇಕ ಆಸ್ಪತ್ರೆಗಳಲ್ಲಿ ಸಂಶೋಧನಾ ವಿಭಾಗಗಳು ಕಾರ್ಯ ನಿರ್ವಹಿಸುತ್ತಿದ್ದು ಸಾಕಷ್ಟು ಸಂಶೋಧನೆಗಳು ನಡೆದಿವೆ. ಕೆಲವು ಸಂಶೋಧನಾ ಸಂಸ್ಥೆಗಳ ಪಟ್ಟಿ ಹೀಗಿದೆ:

★ CCRAS: ಸೆಂಟ್ರಲ್ ಕೌನ್ಸಿಲ್ ಫಾರ್ ರಿಸರ್ಚ್ ಇನ್ ಆಯುರ್ವೇದ ಸೈನ್ಸಸ್, ಹೊಸ ದೆಹಲಿ ಇಲ್ಲಿ ಔಷಧಿ ಸಸ್ಯಗಳ ಬಗ್ಗೆ, ಚಿಕಿತ್ಸಾ ವಿಧಾನಗಳು, ಬುಡಕಟ್ಟು ಜನರ ಆರೋಗ್ಯ ರಕ್ಷಣೆಯ, ಜೀವನಾವಧಿ ಹೆಚ್ಚಿಸುವ ಕುರಿತು ಸಂಶೋಧನೆಗಳು ನಡೆಯುತ್ತಿದೆ.

★ CRISM: ಸೆಂಟರ್ ಫಾರ್ ರಿಸರ್ಚ್ ಇನ್ ಇಂಡಿಯನ್ ಸಿಸ್ಟಮ್ ಆಫ್ ಮೆಡಿಸನ್.

★ NIO: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆಯುರ್ವೇದ.

★ RAIFR: ರೀಜನಲ್ ಆಯುರ್ವೇದ ಇನ್‌ಸ್ಟಿಟ್ಯೂಟ್ ಫಾರ್ ಫಂಡಮೆಂಟಲ್ ರಿಸರ್ಚ್, ಪುಣೆ

★ NCNPR: ನ್ಯಾಷನಲ್ ಸೆಂಟರ್ ಫಾರ್ ನ್ಯಾಚುರಲ್ ಪ್ರಾಡಕ್ಟ್ಸ್ ರಿಸರ್ಚ್.

★ IIAMR: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಯುರ್ವೇದಿಕ್ ಮೆಡಿಸಿನ್ & ರಿಸರ್ಚ್.

★ IIIM: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಟೆಗ್ರೇಟೆಡ್ ಮೆಡಿಸಿನ್.

# ಮೈಸೂರು ಮಹಾರಾಜರ ಕೊಡುಗೆ

ಹದಿನೈದನೆಯ ಶತಮಾನದವರೆಗೆ ದಕ್ಷಿಣ ಭಾರತದಲ್ಲಿ ಏಕೈಕ ವೈದ್ಯಪದ್ಧತಿಯಾಗಿದ್ದ ಆಯುರ್ವೇದಕ್ಕೆ ಎದುರಾಳಿಗಳಾಗಿ ಯುನಾನಿ ಪದ್ಧತಿ, ಹದಿನಾರನೆಯ ಶತಮಾನದಲ್ಲಿ ಐರೋಪ್ಯ ಪದ್ಧತಿ ಆಗಮಿಸಿ ಹದಿನೇಳನೆಯ ಶತಮಾನದಲ್ಲಿ ಕ್ರಮೇಣ ನೆಲೆಯೂರಿದವು. ಮುಸ್ಲಿಂ ಸುಲ್ತಾನರ ಕಾಲದಲ್ಲಿ



ಯುನಾನಿ ಹಕೀಮರು ರಾಜರ ಆಸ್ಥಾನದಲ್ಲಿ ಮತ್ತು ಸಮಾಜದಲ್ಲಿ ವೈದ್ಯವೃತ್ತಿಯನ್ನು ಆರಂಭಿಸಿದರು. ಸುಲಭವಾದ ಮೂಲಿಕಾ ಚಿಕಿತ್ಸೆಗೆ ಬದಲಾಗಿ ರಸಾಯನ ಪ್ರಯೋಗಗಳಿಂದ ಔಷಧಿಗಳನ್ನು ತಯಾರಿಸುವ ಕ್ರಮ ಹೆಚ್ಚು ರೂಢಿಗೆ ಬಂದುದು ಈ ಯುಗದ ಮತ್ತೊಂದು ಪ್ರಮುಖ ಘಟನೆ.

ಬ್ರಿಟಿಷ್ ಆಡಳಿತದ ಭಾರತದಲ್ಲಿ ಕ್ರಮಬದ್ಧವಾಗಿ ಹರಡಿದ್ದರ ಪರಿಣಾಮವಾಗಿ ಆಲೋಪತಿ ವೈದ್ಯಪದ್ಧತಿ ಮಾನ್ಯತೆಯನ್ನು ಪಡೆಯಿತು. ಜನಾರೋಗ್ಯ ರಕ್ಷಣಾಕ್ಷೇತ್ರದಲ್ಲಿ ಪ್ರಥಮವಾಗಿ ಕಾರ್ಯ ನಿರತವಾದ ಈ ಪದ್ಧತಿ ದಿನೇ ದಿನೇ ಬೆಳೆಯುತ್ತ ಪ್ರವರ್ಧಮಾನಕ್ಕೆ ಬಂದು ಇಂದು ಎಲ್ಲೆಲ್ಲಿಯೂ ತನ್ನ ಛಾಪನ್ನೇ ಮೂಡಿಸಿದೆ. ಪ್ರಾಚೀನ ಆಯುರ್ವೇದಕ್ಕೆ ಇದರಿಂದ ಬಹುಮಟ್ಟಿನ ಧಕ್ಕೆ ತಗುಲಿತಾದರೂ ತನ್ನ ಅಂತಃಸತ್ವದಿಂದ ಅದು ಇಂದಿಗೂ ಜನರ ಸೇವೆಯನ್ನು ಸಲ್ಲಿಸುತ್ತಿದೆ.

ಪ್ರಾಚೀನ ಸಂಸ್ಕೃತಿಯನ್ನು ಕಾಪಾಡುವ ನಿಟ್ಟಿನಲ್ಲಿ ಮೈಸೂರು ರಾಜಮನೆತನದ ಒಡೆಯರು ಇದರ ಏಳಿಗೆಗಾಗಿ ಪ್ರಯತ್ನ ಮಾಡಿದವರಲ್ಲಿ ಪ್ರಪ್ರಥಮರು. ಆಯುರ್ವೇದ ಅಧ್ಯಯನವನ್ನು ವ್ಯವಸ್ಥೆಗೊಳಿಸುವ ಉದ್ದೇಶದಿಂದ ಮಹಾರಾಜ ಚಾಮರಾಜ ಒಡೆಯರು ಮೈಸೂರು ನಗರದ ಸಂಸ್ಕೃತ ಮಹಾಪಾಠಶಾಲೆಯಲ್ಲಿ ೧೯೦೮ರಲ್ಲಿ ಆಯುರ್ವೇದ ವಿಭಾಗವೊಂದನ್ನು ಸ್ಥಾಪಿಸಿದರು. ನಂತರ ಪ್ರತ್ಯೇಕವಾಗಿ ಆಯುರ್ವೇದ ವೈದ್ಯಕೀಯ ಕಾಲೇಜು ಆರಂಭವಾಗಿ ಇಂದಿನವರೆಗೆ ಸಾವಿರಾರು ವಿದ್ಯಾರ್ಥಿಗಳು ವೈದ್ಯರನ್ನಾಗಿ ರೂಪಿಸಿ ಸಮಾಜದ ಉನ್ನತಿಗೆ ದುಡಿಯಲು ಪ್ರೇರೇಪಿಸಿದೆ.